ಶ್ರೀ ನಾರಾಯಣ ರಾವ್ ಮನಹಳ್ಳಿ : ಈ ಅಧಿವೇಶನ ಮುಗಿಯುವುದರೊಳಗಾಗಿ ಉತ್ತರವನ್ನು ಕೊಡಬಹುದೆ?

ಅಧ್ಯಕ್ಷರು : ವ್ಯವಸ್ಥೆ ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಕೇಶವಮೂರ್ತಿಯವರು ಉಪಸ್ಥಿತರಿರಲಿಲ್ಲ)

ರೇಷ್ಮೆ ಬೆಳೆಯ ಬಗ್ಗೆ

656 - ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಟಿ ಗೂಡು ಬೆಳೆಯುವ ರೈತರ ಉದಾಸೀನದಿಂದ ರೇಷ್ಮೆ ಬೆಳೆ ಹಾಳಾಗುತ್ತಿದ್ದು ರೇಷ್ಮೆ ಬೆಳೆಗಾರ ಇಂಥ ಕೋಟ್ಯಾಂತರ ರೂಪಾಯಿಗಳ ಕಪ್ಪಕ್ಕೆ ಗುರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಇರುವ ನಾಟಿ ಗೂಡು ಬೆಳೆಯುವ ಪ್ರದೇಶವನ್ನು ಕೈಬಿಟ್ಟು ಬೇರೆ ಸುರಕ್ಷಿತ ಪ್ರದೇಶವೊಂದನ್ನು ಆಯ್ಕೆ ಮಾಡಲು ಸರ್ಕಾರದವರು ನಿರ್ಧರಿಸುವರೇ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ಬಿತ್ತನೆ ವಲಯದ ಎಲ್ಲಾ ಬೆಳೆಗಳ ಬಗ್ಗೆ ಸೂಕ್ತ ಮೇಲ್ವಿಚಾರಣೆಯನ್ನು ಹಾಕಿಕೊಳ್ಳಲಾಗಿದೆ. ಎಲ್ಲೆಲ್ಲಿ ಬೆಳೆಗಳು ಗಂಟು ರೋಗದ ಕಾರಣದಿಂದ ಹಾಗಿವೆಯೋ ಅಂತಹ ಕಡೆಗಳಲ್ಲಿ ಗಂಟು ರೋಗವನ್ನು ನಿಯಂತ್ರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಸದ್ಯಕ್ಕೆ ಬೇರೆ ನಾಟಿ ಗೂಡು ಬೆಳೆಯುವ ಪ್ರದೇಶವನ್ನು ಆಯ್ಕೆ ಮಾಡುವ ಉದ್ದೇಶವಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷತೆ, ಮಾನ್ಯ ಮಂತ್ರಿಗಳ ಈ ಉತ್ತರದಿಂದ ಈಗ ಹಾಳಾಗುತ್ತಾ ಇರತಕ್ಕಂಥ ಕೋಟ್ಯಾಂತರ ರೂಪಾಯಿ ಬೆಲೆಬಾಳತಕ್ಕ ರೇಷ್ಮೆ ಬೆಳೆಯತಕ್ಕ ಯಾವ ರೀತಿಯ ಸಮಾಧಾನ ಆಗುತ್ತಾ ಇಲ್ಲ. ಸುಮಾರು ಮೂರು ತಿಂಗಳುಗಳಿಂದ ಪ್ರಾರಂಭವಾದಂಥ ಈ ಒಂದು ಗಂಟು ರೋಗದ ಕಾರಣದಿಂದಾಗಿ ನಮ್ಮ ಭಾಗದಲ್ಲಿ ರೇಷ್ಮೆ ಬೆಳೆ ಬೆಳೆಯತಕ್ಕಂಥ ಸಾವಿರಾರು ಮಂದಿ ರೈತರಿಗೆ ಅಪಾರ ಹಾನಿ ಮತ್ತು ನಷ್ಟವನ್ನು ಉಂಟು ಮಾಡಿದೆ. ಮಾನ್ಯ ಸಚಿವರು ನಿವಾರಣೋಪಾಯದ ಕಾರ್ಯಯಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಅದರಿಂದ ಆ ರೋಗದ ವಿಚಾರದಲ್ಲಿ ಯಾವುದೇ ನಿಯಂತ್ರಣವಾಗಿಲ್ಲ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ನಿರ್ದಿಷ್ಟವಾದಂಥ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಸದಸ್ಯರು ತಿಳಿಸಿದಂತೆ ಈ ಗಂಟುರೋಗ ಪಬ್ಬುವುದು ಎರಡು ಮೂರು ವರ್ಷಗಳಿಂದ ಜಾಸ್ತಿಯಾಗಿದೆ. ಸರ್ಕಾರ ಈ ಬಗ್ಗೆ ವಿಶೇಷ ಆಸಕ್ತಿವಹಿಸಿ ಆ ರೋಗವನ್ನು ತಡೆಯುವ ಕ್ರಮವನ್ನು ತೆಗೆಮಕೊಳ್ಳುತ್ತಿದೆ. ಅನೇಕ ಸುಧಾರಿತ ಕಾರ್ಯಕ್ರಮ ಹಾಕಿಕೊಳ್ಳುತ್ತಿದೆ. ವಿಶೇಷವಾಗಿ ಆ ಪ್ರದೇಶದ ರೈತರಿಗೆ ಮೂಲ ಸೌಲಭ್ಯಗಳಾದ ರೇಷ್ಮೆ ಹುಳ ಬೆಳೆಸುವ ಮನೆ ಮತ್ತಿತರ ಸಾಮಗ್ರಿಗಳಿಗೆ ಬೇಕಾದ ಹಣವನ್ನು ಸರ್ಕಾರದ ವತಿಯಿಂದ ಒದಗಿಸಿ ಅವರನ್ನು ಬಲಪಡಿಸಿ, ಆ ರೋಗವನ್ನು ತಡೆಯತಕ್ಕ ಯೋಜನೆ ಹಾಕಿದ್ದೇವೆ. ಜೊತೆಗೆ ಇಪ್ಪತ್ತು ದಿವಸ ನಾವು ಎರಡು ಅಥವಾ ಮೂರು ಬಾರಿ ರೋಗ ನಿವಾರಣಾ ಸಿಂಪರಣೆ ಔಷಧವನ್ನು ಹೊಡೆಯುತ್ತಿದ್ದವು, ಈಗ ಸುಮಾರು 6 ಬಾರಿ ಹೊಡೆಯುತ್ತಿದ್ದೇವೆ. ಇತ್ತೀಚೆಗೆ ಇದರಿಂದ ಸ್ವಲ್ಪ ಕಂಟ್ರೋಲ್ ಆಗುತ್ತಿದೆ. ಅಲ್ಲದೆ ಒಳ್ಳೆಯ ಮೊಟ್ಟೆ ಒದಗಿಸುವ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತಿದ್ದೇವೆ.

ಶ್ರೀ ಸಿ.ಎಂ. ಲಿಂಗಪ್ಪ : ನನ್ನ ಎರಡನೇ ಉಪ ಪ್ರಶ್ನೆಗೆ ಉತ್ತರದಲ್ಲಿ ತಿಳಿಸಿದ್ದೀರಿ. ತಾವು ಈಗ ಬಿತ್ತನೆ ಪ್ರದೇಶ ಎಂದು ಯಾವುದನ್ನು ನಿರ್ಧಾರ ಮಾಡಿದ್ದೀರಿ ಅಲ್ಲಿಂದ ಈ ರೋಗ ಪ್ರಾರಂಭವಾಗಿ ಮಿಶ್ರಬೆಳೆ ಬೆಳೆಯತಕ್ಕ ಪ್ರದೇಶಗಳಿಗೂ ಹಬ್ಬುತ್ತಿದ್ದು ಇದಕ್ಕೆಲ್ಲ ಅಧಿಕಾರಿಗಳ ನಿರ್ಲಕ್ಷ್ಯವೆ ಕಾರಣವೆಂದು ನನ್ನ ಮೊದಲ ಆಪಾದನೆ. ಅವರು ಸರಿಯಾಗಿ ಉಸ್ತುವಾರಿ ಮಾಡದಿದ್ದರಿಂದ ಮಿಶ್ರ ಬೆಳೆ ಬೆಳೆಯುವ ಪ್ರದೇಶಕ್ಕೂ ಬಂದು ಹಾಳು ಮಾಡುತ್ತಿದೆ ಎಂದು ಅನಿಸುತ್ತದೆ. ಪರಿಣಾಮವಾಗಿ ಹಳೆ ಮೈಸೂರಿನ ಕಡೆಯೆಲ್ಲ ಈ ಬೆಳೆ ಬೆಳೆಯುವುದನ್ನೇ ನಿಲ್ಲಿಸುವಂತಹ ಪರಿಸ್ಥಿತಿ ಬಂದಿದ್ದು ಕೊನೆಗೆ ಅಕ್ಕಪಕ್ಕದ ಆಂಧ್ರ-ತಮಿಳುನಾಡುಗಳಿಂದ ರೇಷ್ಮೆಯನ್ನು ತರಿಸಿಕೊಳ್ಳಬೇಕಾದಂಥ ಸನ್ನಿವೇಶ ಉಂಟಾಗುವುದೇನೋ ಎಂಬ ಭಯಂಕರ ಭೀತಿ ನಮ್ಮನ್ನು ಕಾಡುತ್ತಿದೆ. ಆದ್ದರಿಂದ ನನ್ನ ಎರಡನೇ ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ಕೂಡ ಪುನರವಲೋಕನ ಮಾಡಿ ಅಮೂಲಾಗ್ರವಾಗಿ ಒಂದು ಕ್ರಾಫ್ ಪ್ರೋಗ್ರಾಂ ತೆಗೆದುಕೊಳ್ಳುವುದಕ್ಕೆ ಸದನದಲ್ಲಿ ಭರವಸೆ ಕೊಡುತ್ತೀರಾ?

ಶ್ರೀ ವಿ. ಮುನಿಯಪ್ಪ : ತಮ್ಮ ಎರಡನೇ ಪ್ರಶ್ನೆಗೆ ಉತ್ತರ ಹೇಳುವುದಾದರೆ, ಈಗಾಗಲೆ ಮೈಸೂರು ಬಿತ್ತನೆ ವಲಯ ಎಂದು ಇಟ್ಟಿದ್ದು ಅದು ನಿಜವಾಗಲೂ ಆ ಪ್ರದೇಶ ಬಹಳ ಉಪಯುಕ್ತವಾದದು ಬಹಳ ಸೂಕ್ತವಾದುದು ಎಂಬ ವರದಿ ಸರ್ಕಾರ ಇಟ್ಟುಕೊಂಡಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ತಾಂತ್ರಿಕ ಕ್ರಮಗಳು ಸಕ್ರಮವಾಗಿ ಆಗದಿರುವುದು ಸರ್ಕಾರದ ಗಮನದಲ್ಲಿದೆ. ಅದಕ್ಕಾಗಿ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಹೆಚ್ಚಿನ ಅಧಿಕಾರಿಗಳನ್ನು ಈ ಸಲ ಆ ಪ್ರದೇಶಕ್ಕೆ ಹಾಕಿದ್ದೇವೆ, ಆ ಮೂಲಕ ರೋಗ ನಿಯಂತ್ರಣಕ್ಕೆ ಕೆಲಸ ಮಾಡುತ್ತೇವೆ.

ಶ್ರೀ ಪಿ.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಮೈಸೂರು ಬಿತ್ತನೆ ವಲಯಕ್ಕೆ ಮಾಗಡಿ ಕೂಡ ಸೇರುತ್ತದೆ. ಮಾನ್ಯ ಸಚಿವರು ಹೇಳಿದಂತೆ ಯಾವುದೇ ಕಾರ್ಯಕ್ರಮ ಅಲ್ಲಿ ಪ್ರಾರಂಭವಾಗಿಲ್ಲ. ಆದ್ದರಿಂದ ರೈತರಿಗೆ ರೋಗ ನಿವಾರಣೆಗೆ ಸೂಕ್ತ ಸೌಲಭ್ಯ ಕೊಡಬೇಕು. ಜೊತೆಗೆ ಅಲ್ಲಿನ ಅಭಿವೃದ್ಧಿ ದೃಷ್ಟಿಯಿಂದ 5 ಪರ್ಸೆಂಟ್ ಬೋನಸ್ ಕೂಡ ಜಾಸ್ತಿ ಮಾಡಬೇಕು. ಅದು ಆಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಬೋನಸ್ ಕೊಡುವ ವಿಚಾರದಲ್ಲಿ ಸರ್ಕಾರ ಇನ್ನು ಪರಿಶೀಲನೆಯಲ್ಲಿಟ್ಟುಕೊಂಡಿದೆ, ಆದರೆ ರೋಗ ತಡೆಯುವ ಕಾರ್ಯಕ್ರಮಕ್ಕೆ ಸಂಪೂರ್ಣವಾಗಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಸಚಿವರು ಬಿತ್ತನೆ ವಲಯದ ಎಲ್ಲ ಬೆಳೆಗಳ ಬಗ್ಗೆ ಸೂಕ್ತ ಮೇಲ್ವಿಚಾರಣೆಯನ್ನು ಹಾಕಿಕೊಳ್ಳಲಾಗಿದೆ ಎಂದು ಕೆಟಗರಿಕಲ್ಲಾಗಿ ಹೇಳಿದ್ದಾರೆ. ಈಗಾಗಲೇ ಮಾನ್ಯ ರೇವಣ್ಣನವರು ಮಾಗಡಿ ಕಡೆ ಯಾವುದೇ ಕಾರ್ಯಕ್ರಮ ಹಾಕಿಲ್ಲ ಎಂದು ಹೇಳಿದರು. ಇವೆರಡರಲ್ಲಿ ಯಾವುದು ಸತ್ಯ? ತಮ್ಮ ರಾಜ್ಯದಲ್ಲಿ ಇವತ್ತು ಬಿತ್ತನೆ ವಲಯ ಇರುವುದೇ ಸೀಮಿತ ಪ್ರದೇಶ. ಈ ಸೀಮಿತವಾದ ಪ್ರದೇಶದಲ್ಲಿ ಇವರು ಸರಿಯಾಗಿ ಉಸ್ತುವಾರಿ ನಡೆಸದಿದ್ದರೆ ಇಡೀ ರಾಜ್ಯದಲ್ಲಿ ರೇಷ್ಮೆ ಬೆಳೆ ಬೆಳೆಯುವ ಜಿಲ್ಲೆಗಳಾದ ಮೈಸೂರು, ಕೋಲಾರ, ಬೆಂಗಳೂರು, ಮಂಡ್ಯ ಮುಂತಾದ ಜಿಲ್ಲೆಗಳಲ್ಲಿ ರೇಷ್ಮೆ ಉದ್ಯಮ ಸರ್ವನಾಶದ ಅಂಚಿನಲ್ಲಿದೆ. ಇದಕ್ಕೆ ಮುಖ್ಯವಾದ ಕಾರಣವನ್ನು ಮಾನ್ಯ ಸದಸ್ಯರಾದ ರೇವಣ್ಣರವರು ಹೇಳಿದ್ದಾರೆ. ಅಲ್ಲಿ ಏನೂ ಕಾರ್ಯಕ್ರಮವನ್ನು ಕೂಡಾ ಹಾಕಿಲ್ಲ ಮತ್ತು ಅಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ ಎಂದು ಕೂಡಾ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಸ್ವತಃ ರೇಷ್ಮೆ ಬೆಳಿಗಾರರು ಕೂಡಾ ಆಗಿದ್ದಾರೆ. ಅವರು ಕೂಡಾ ಈ ಬೆಳೆಯಿಂದ ಸಾಕಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ. ಅದೇ ರೀತಿ ಲಕ್ಷಾಂತರ ರೈತರು ಕೂಡಾ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ನೀವು ಏನೇನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಅಧಿಕಾರಿಗಳ ನಿರ್ಲಕ್ಷ್ಯತನ ಕೂಡಾ ಇದೆ ಎಂದು ತಾವು ಕೂಡ ಒಪ್ಪಿದ್ದೀರಿ, ಅಂಥ ಅಧಿಕಾರಿಗಳ ಮೇಲೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎನ್ನುವ ವಿವರಣೆ ಕೊಡಿ ಏಕೆಂದರೆ, ಈ ರೇಷ್ಮೆ ಬೆಳೆ ಇವತ್ತು ವಿನಾಶದ ಅಂಚಿನಲ್ಲಿದೆ. ಇದರ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರು ತಾವು ಇದರ ಬಗ್ಗೆ ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಪ್ರಪ್ರಥಮವಾಗಿ ಒಂದು ವಲಯಕ್ಕೆ ಸುಮಾರು 300-400 ರೈತರುಗಳನ್ನು ಒಬ್ಬ ವಲಯಾಧಿಕಾರಿಯ ವಶಕ್ಕೆ ಕೊಡುತ್ತಿದ್ದೆವು. ಅವರು ಮೇಲು ಉಸ್ತುವಾರಿ ನೋಡಿಕೊಂಡು ರೈತರಿಗೆ ತಾಂತ್ರಿಕ ಸಲಹೆಗಳನ್ನು ಕೊಡತಕ್ಕಂಥದ್ದನ್ನು ಅದರ ಮುಖಾಂತರ ನಾವು ನಡೆಯುತ್ತಿದ್ದೆವು. ಅದರೆ ಇತ್ತೀಚೆಗೆ ಈ ರೋಗ ಬಹಳ ಜಾಸ್ತಿಯಾದುದರಿಂದ ಈ ರೋಗವನ್ನು ತಡೆಯುವುದಕ್ಕೆ ಸುಮಾರು 50ರಿಂದ 80 ಜನ ರೈತರುಗಳಿಗೆ ಒಬ್ಬ ಅಧಿಕಾರಿಯನ್ನು ಈಗಾಗಲೇ ಅಲ್ಲಿಗೆ ವರ್ಗ ಮಾಡಿದ್ದೇವೆ. ಈ ರೀತಿ ಸುಮಾರು 60 ಅಧಿಕಾರಿಗಳ ವಿಶೇಷವಾದ ತಂಡವನ್ನು ನಾವು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಆ ಪ್ರದೇಶದಲ್ಲಿ ಇರತಕ್ಕಂಥ ರೋಗವನ್ನು ತಡೆಯುವುದಕ್ಕೆ, ಡಿಸ್-ಇನ್‌ಫೆಕ್ಷನ್ ಪ್ರೋಗ್ರಾಂ ಮಾಡುವುದಕ್ಕೆ ಅವರನ್ನು ಕಳುಹಿಸಿದ್ದೇವೆ ಮತ್ತು ಅವರಿಗೆ ವಿಶೇಷವಾಗಿ ವಾಹನಗಳನ್ನು ಸಹಾ ನಾವು ಅವರಿಗೆ ಕೊಟ್ಟಿದ್ದೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ರೇವಣ್ಣನವರು ಉತ್ತವನ್ನು ಕೊಟ್ಟಿದ್ದಾರೆ. ರೇವಣ್ಣನವರು ಬಿತ್ತನೆ ವಲಯದಲ್ಲಿ ಬಂದಿರತಕ್ಕಂಥವರು. ಅವರ ತಾಲ್ಲೂಕನ್ನು ಬಿತ್ತನೆ ವಲಯ ಎಂದು ಮಾಡಿದ್ದಾರೆ.

ಅಧ್ಯಕ್ಷರು : ರೇವಣ್ಣನವರು ಉತ್ತರ ಕೊಡುವುದಕ್ಕೆ ಅವಕಾಶ ಮುಂದೆ ಬರಬಹುದೇನೋ, ಈಗ ಅವಕಾಶ ಇಲ್ಲ. ಈಗ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಅವಕಾಶ ಇದೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ರೇವಣ್ಣನವರ ಪ್ರಶ್ನೆಗೆ ಉತ್ತರ ಹೇಳುವುದಾದರೆ, ನಾವು ಇತ್ತೀಚೆಗೆ ಆ ಒಂದು ಬಿತ್ತನೆಯ ವಲಯ ಪ್ರದೇಶದಲ್ಲಿ ರೇಷ್ಮೆ ಬೆಳೆಗಾರರ ಸಮ್ಮೇಳನವನ್ನು ಸಹಾ ಮಾಡಿದ್ದೇವೆ. ಅಲ್ಲಿ ಇರತಕ್ಕಂಥ ಸಮಸ್ಯೆಗಳ ಬಗ್ಗೆ, ರೋಗವನ್ನು ತಡೆಯತಕ್ಕಂಥ ಒಂದು ಕೆಲಸದ ಬಗ್ಗೆ ಸಂಪೂರ್ಣವಾಗಿ ನಾವು ಆ ಒಂದು ಸಮ್ಮೇಳನದಲ್ಲಿ ಚರ್ಚೆ ಮಾಡಿ, ಅದಕ್ಕೆ ಒಂದು ಯೋಜನೆಯನ್ನು ಕೂಡಾ ಸರ್ಕಾರದ ವತಿಯಿಂದ ನಿರೂಪಣೆ ಮಾಡುತ್ತಿದ್ದೇವೆ. ವಿಶೇಷವಾಗಿ ರೈತರಿಗೆ ಮೂಲಭೂತವಾಗಿ ಬೇಕಾದಂಥ ಒಂದು ಹುಳ ಸಾಕಾಣಿಕೆ ಮನೆ ಮತ್ತು ಅದಕ್ಕೆ ಬೇಕಾದಂಥ ಸಾಮಗ್ರಿಗಳು ಜೊತೆಗೆ ನೀರಾವರಿ ವ್ಯವಸ್ಥೆ ಇವೆಲ್ಲಕ್ಕೂ ಸುಮಾರು 9 ಕೋಟಿ, 19 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ನಿರೂಪಣೆ ಮಾಡಿ ನಾವು ಇವತ್ತು ಆ ಪ್ರದೇಶವನ್ನು ಬಲಪಡಿಸತಕ್ಕಂಥ ಕೆಲಸಕ್ಕೆ ನಾವು ಕೈ ಹಾಕಿದ್ದೇವೆ.

ಮೂಡಿಗೆರೆ ತಾಲ್ಲೂಕಿನಲ್ಲಿ ವಿದ್ಯುತ್ ಷಾಕ್‌ನಿಂದ ಮೃತರಾದವರ ಕುಟುಂಬಕ್ಕೆ ಪರಿಹಾರ ಧನ ಸಹಾಯ

97 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಷಾಕ್‌ನಿಂದ ಮೂಡಿಗೆರೆ ತಾಲ್ಲೂಕಿನಲ್ಲಿ 1987ರಿಂದ ಇಲ್ಲಿಯತನಕ ಎಷ್ಟು ಜನ ಸಾವಿಗೀಡಾಗಿದ್ದಾರೆ?

ಆ) ಈ ತಾಲ್ಲೂಕಿನಲ್ಲಿ ವಿದ್ಯುತ್ ಷಾಕ್‌ನಿಂದ ಮೃತರಾದ ಎಷ್ಟು ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ಧನ ಕೊಡಲಾಗಿದೆ?